8. 3ನೇ ತರಗತಿಯಿಂದಲೇ ಇಂಗ್ಲೀಷ್ ಭಾಷಾ ಜ್ಞಾನವನ್ನು ಪರಿಚಯಿಸಲಾಗಿದೆ.

9. ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ನೀಡುವ ಸಲುವಾಗಿ ಇಲ್ಲಿಯವರೆಗೆ 4301 ಹಿರಿಯ ಪ್ರಾಥಮಿಕ ಶಾಲೆಗಳಿಗೆ ಕಂಪ್ಯೂಟರ್ ಮತ್ತು ಯು.ಪಿ.ಎಸ್. ಒದಗಿಸಲಾಗಿದೆ.

10. ಅನುಷ್ಠಾನಗೊಂಡಿರುವ ಕೆಲವು ಚಟುವಟಿಕೆಗಳ ಪರಿಣಾಮವನ್ನು ಅರಿಯಲು ಸಂಶೋಧನೆ ಕೈಗೊಳ್ಳಲಾಗಿದೆ.

11. ಮಕ್ಕಳನ್ನು ಶಾಲೆಗೆ ಆಕರ್ಷಿಸಲು 1 ರಿಂದ 3ನೇ ತರತಿಯವರೆಗಿನ ಮಕ್ಕಳಿಗೆ ಡ್ರಾಯಿಂಗ್ ಪುಸ್ತಕ ಹಾಗೂ ಕ್ರೇಯಾನ್ಸ್‌ಗಳನ್ನು ಒದಗಿಸಲಾಗಿದೆ.

12. ಹಿರಿಯ ಪ್ರಾಥಮಿಕ ಶಾಲೆಗಳಿಗೆ ಜಿಯೋ ಕಿಟ್‌ಗಳನ್ನು ಒದಗಿಸಲಾಗಿದೆ.

ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

1400(1946); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಸ್ವಚ್ಛತ ಅಭಿಯಾನದ ಕುರಿತಾದ ವಿವರಗಳನ್ನು ಒದಗಿಸುವುದು.

ಆ) ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಚ್ಛತಾ ಯೋಜನೆಗಳ ಅನುಷ್ಠಾಕ್ಕಾಗಿ ನಿರ್ಮಲ ಭಾರತ್ ಅಭಿಯಾನ ಯೋಜನೆಯಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಮೀಸಲಿಟ್ಟ ಅನುದಾನದ ಮೊತ್ತ ಎಷ್ಟು;

ಇ) ಸ್ವಚ್ಛ ಗ್ರಾಮ ಕಾರ್ಯಕ್ರಮದ ವ್ಯಾಪ್ತಿಯಲ್ಲಿ ಶೌಚಾಲಯಗಳ ನಿರ್ಮಾಣಕ್ಕಾಗಿ ನೀಡುತ್ತಿರುವ ಆರ್ಥಿಕ ನೆರವು ಹಾಗೂ ಮತ್ತಿತರ ರೀತಿನೀತಿಗಳ ಕುರಿತಾದ ವಿವರಗಳನ್ನು ಒದಗಿಸುವುದು?

ಶ್ರೀ ಹೆಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರು)

ಅ) ನಿರ್ಮಲ ಭಾರತ ಅಭಿಯಾನ ಯೋಜನೆಯ ಪ್ರಮುಖ ಉದ್ದೇಶವು ಗ್ರಾಮೀಣ ಪ್ರದೇಶದಲ್ಲಿನ ಪ್ರತಿಯೊಂದು ಕುಟುಂಬವು ಶೌಚಾಲಯ ನಿರ್ಮಿಸಿ, ಬಳಸುವಂತೆ ಪ್ರೇರೇಪಿಸಿ, ಬಯಲು ಮಲ ವಿಸರ್ಜನೆಯನ್ನು ಸಂಪೂರ್ಣವಾಗಿ ಮುಕ್ತಗೊಳಿಸುವುದಾಗಿರುತ್ತದೆ.

ಯೋಜನೆಯ ಪ್ರಮುಖ ಘಟಕಾಂಶಗಳು ಮತ್ತು ಪ್ರೋತ್ಸಾಹಧನ/ಅನುದಾನದ ಲಭ್ಯತೆ

- ವೈಯಕ್ತಿಕ ಗೃಹ ಶೌಚಾಲಯ

  ಬಿ.ಪಿ.ಎಲ್ ಹಾಗೂ ಎ.ಪಿ.ಎಲ್ ನಿರ್ಬಂದಿತ ಕುಟುಂಬಗಳಿಗೆ ಶೌಚಾಲಯ ನಿರ್ಮಾಣಕ್ಕೆ ಒಟ್ಟು ₹ 10.100 (ಎನ್.ಬಿ.ಎ ಯೋಜನೆಯಡಿ. ₹ 4700/-)

  ಎಂ.ಎನ್.ಆರ್.ಜಿ.ಎಸ್. ಯೋಜನೆಯಡಿ ₹ 5400/- (06.01.2014 ರಿಂದ)

  ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಕುಟುಂಬಗಳಿಗೆ ಹೆಚ್ಚುವರಿಯಾಗಿ ₹ 5000/-ಗಳು(ಸಮಾಜ ಕಲ್ಯಾಣ ಇಲಾಖೆಯ ಎಸ್.ಸಿ.ಪಿ & ಟಿ.ಎಸ್.ಪಿ ಯಡಿ)

- ಶಾಲಾ ಶೌಚಾಲಯ

  ಪ್ರತೀ ಘಟಕಕ್ಕೆ ₹ 35.000/-ಗಳು

- ಅಂಗನವಾಡಿ ಶೌಚಾಲಯ

  ಪ್ರತೀ ಘಟಕಕ್ಕೆ ₹ 15,000/-ಗಳು

- ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ

  ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಹಗೂ ವೈಯಕ್ತಿಕ ಶೌಚಾಲಯದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿದಂತಹ ಗ್ರಾಮ ಪಂಚಾಯಿತಿಗಳಲ್ಲಿ ಘನ ಮತ್ತು ದ್ರವತ್ಯಾಜ್ಯ ನಿರ್ವಹಣೆ ಅನುಷ್ಠಾನ ಮಾಡಲು ಅವಕಾಶವಿರುತ್ತದೆ.

  ಕುಟುಂಬಗಳ ಸಂಖ್ಯೆ ಆಧಾರದ ಮೇಲೆ ₹ 7.00 ಲಕ್ಷದಿಂದ ₹ 20.00 ಲಕ್ಷಗಳ ವರೆಗೆ ಅನುದಾನ ಪಡೆಯಬಹುದಾಗಿರುತ್ತದೆ.

- ಸಮುದಾಯ ಶೌಚಾಲಯ

  ಪ್ರತೀ ಘಟಕಕ್ಕೆ ₹ 1.80 ಲಕ್ಷಗಳು

ಆ) 2013–14ನೇ ಸಾಲಿಗೆ ನಿಗಧಿಪಡಿಸಿದ ಅನುದಾನ.

ಕೇಂದ್ರ: 6594.68 ಲಕ್ಷಗಳು

ರಾಜ್ಯ: 4262.50 ಲಕ್ಷಗಳು

ಒಟ್ಟು: **10857.18 ಲಕ್ಷಗಳು**

ಇ) ಈ ಯೋಜನೆಯಡಿ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಬಿ.ಪಿ.ಎಲ್ ಹಾಗೂ ನಿರ್ಬಂದಿತ ಎ.ಪಿ.ಎಲ್ (ಅನುಸೂಚಿತ ಜಾತಿ & ಪಂಗಡ ಕುಟುಂಬಗಳು, ಸಣ್ಣ ಮತ್ತು ಅತೀ ಸಣ್ಣ ರೈತ ಕುಟುಂಬಗಳು, ಭೂ ರಹಿತ ನಿರಾಶ್ರಿತ ಕುಟುಂಬಗಳು, ಮಹಿಳಾ ಪ್ರಧಾನ ಕುಟುಂಬಗಳು ಹಾಗೂ ಅಂಗವಿಕಲ) ಕುಟುಂಬಗಳಿಗೆ ಶೌಚಾಲಯ ನಿರ್ಮಾಣಕ್ಕೆ ಒಟ್ಟು ₹ 10.100 (ಎನ್.ಬಿ.ಎ ಯೋಜನೆಯಡಿ ₹ 4700/– ಎಂ.ಎನ್.ಆರ್.ಜಿ.ಎಸ್. ಯೋಜನೆಯಡಿ ₹ 5400/–)

ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಕುಟುಂಬಗಳಿಗೆ ಹೆಚ್ಚುವರಿಯಾಗಿ ₹ 5000/–ಗಳನ್ನು (ಸಮಾಜ ಕಲ್ಯಾಣ ಇಲಾಖೆಯ ಎಸ್.ಸಿ.ಪಿ & ಟಿ.ಎಸ್.ಪಿ ಯಡಿ) ನೀಡಲಾಗುತ್ತಿದೆ.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಈ ಯೋಜನೆಯು ಬೇಡಿಕೆ ಆಧಾರಿತ ಕಾರ್ಯಕ್ರಮ ಆಗಿರುವುದರಿಂದ ಫಲಾನುಭವಿಯೇ ಸ್ವತಃ ಶೌಚಾಲಯ ನಿರ್ಮಿಸಿಕೊಂಡು ಬಳಸುತ್ತಿದ್ದರೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಈ ಯೋಜನೆಯಡಿ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಟೆಂಡರ್ ಅಥವಾ ಗುತ್ತಿಗೆ ನೀಡಲು ಅವಕಾಶವಿರುವುದಿಲ್ಲ.

ರಾಜೀವ ಗಾಂಧಿ ಚೈತನ್ಯ ಯೋಜನೆಯ ಅನುಷ್ಠಾನ

1401(1947); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)

ಅ) ರಾಜೀವ್ ಗಾಂಧಿ ಚೈತನ್ಯ ಯೋಜನೆಯ ಅನುಷ್ಠಾನದ ಕುರಿತಾದ ವಿವರಗಳೇನು; ಎಷ್ಟು ನಿರುದ್ಯೋಗಿ ಯುವ ಜನರಿಗೆ ಉದ್ಯೋಗವನ್ನು ಒದಗಿಸಲು ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಆ) ಯೋಜನೆಯ ಸದುದ್ದೇಶದ ಮೂಲಕ ಸ್ವಯಂ ಉದ್ಯೋಗ ತರಬೇತಿ ನೀಡುವ ಕುರಿತಾದ ವಿವರಗಳನ್ನು ಒದಗಿಸುವುದು;

ಇ) ಗ್ರಾಮ ಪಂಚಾಯತ್ ವತಿಯಿಂದ ಯುವಜನರ ಆಯ್ಕೆಯ ಸಂಖ್ಯೆಯನ್ನು ಹೆಚ್ಚಿಸುವ ಹಾಗೂ ಕನಿಷ್ಠ ಶಿಕ್ಷಣ ಪಡೆದ ಯುವಜನರಿಗೆ ಆದ್ಯತೆ ನೀಡುವ ಕುರಿತು ಸರಕಾರ ಕ್ರಮ ಕೈಗೊಳ್ಳುವುದೇ?